ಪರಿಕಲ್ಪನೆಯಲ್ಲಿ ಅದು ಹಿಂದಿಗಿಂತ ಹೆಚ್ಚು ಮಾತನಾಡಬೇಕಿದೆ. ಸೃಜನಶೀಲ ಮತ್ತು ಸಂಶೋಧನಾ ಬರಹವನ್ನು ದೊಡ್ಡ ಪ್ರಮಾಣದಲ್ಲಿ ಮಾಡುವ ಸಾಮೂಹಿಕ ಹೊಣೆಗಾರಿಕೆಯ ಅಗತ್ಯವಿದೆ. ಸಂವಾದ ಪರಂಪರೆ ನಶಿಸುತ್ತಿದೆ. ವಿಶ್ವವಿದ್ಯಾಲಯಗಳಲ್ಲಿ ಜ್ಞಾನಪರಂಪರೆ ಕೂಡ ಕ್ಷೀಣಿಸುತ್ತಿದೆ. ಇದರಿಂದಾಗಿ ವಿಮರ್ಶೆ ಮತ್ತು ಸಾಹಿತ್ಯ ಓದಿನ ಹರವು ವಿಸ್ತಾರವಾಗುತ್ತಿಲ್ಲ. ಇದು ದೊಡ್ಡ ಲೋಪ. ಪ್ರಸ್ತುತ ಸಂದರ್ಭದಲ್ಲಿ ಅಕ್ಷರವನ್ನು ವ್ಯಾಪಾರಕ್ಕೆ ಇಟ್ಟಿದ್ದೇವೆ. ಶಿಕ್ಷಣವನ್ನು ಖರೀದಿ ಮಾಡುತ್ತಿದ್ದೇವೆ.


ಕಾವ್ಯ ಮತ್ತು ಗದ್ಯ ಸಾಹಿತ್ಯ ಚಲನಶೀಲವಾಗಿದೆ. ಬದಲಾದ ಸನ್ನಿವೇಶಕ್ಕೆ ಅವು ಪ್ರತಿಸ್ಪಂದಿಸುತ್ತಿವೆ. ಕಾವ್ಯಕ್ಕಿಂತ ಕಥೆಯಲ್ಲಿ ಅನುಭವಲೋಕ ದೊಡ್ಡ ಪ್ರಮಾಣದಲ್ಲಿ ಅನಾವರಣವಾಗುತ್ತಿದೆ. ಅದಕ್ಕೆ ಸರಿಸಮವಾಗಿ ವಿಮರ್ಶೆ ಬರುತ್ತಿಲ್ಲ. ಬಂದಿರುವ ವಿಮರ್ಶಾಲೋಕವನ್ನು ಗುರುತಿಸುವುದೂ ಕಡಿಮೆ ಆಗಿದೆ. ಕನ್ನಡ ವಿಮರ್ಶಾ ಲೋಕ ಅಭದ್ರತೆಯಿಂದ ಕೂಡಿದೆ. ಅದು ವಿದ್ವತ್ತಿಗಾಗಿ ವಿಸ್ತಾರವಾದ ಓದಿಗೆ ತೆರೆದುಕೊಳ್ಳುತ್ತಿಲ್ಲ ಎಂದೆನಿಸುತ್ತಿದೆ. ರಾಜಕೀಯ ಕೇಂದ್ರವಾಗಿ ಜಾತಿ ನೋಡುತ್ತಿದ್ದೇವೆ. ಸಂಸ್ಕೃತಿಯ ಕೇಂದ್ರವಾಗಿ ಜಾತಿಯನ್ನು ಕುಲಶಾಸ್ತ್ರೀಯವಾಗಿ ನೋಡಿದರೆ ನಮಗೆ ದಕ್ಕುವ ನೋಟವೇ ಬೇರೆ. ಜಾತಿ ಕುರಿತು ಅಧ್ಯಯನ ಮಾಡುತ್ತಲೇ ಜಾತಿವಾದಕ್ಕೆ ಬೇಗ ಬಲಿಯಾಗುತ್ತಿದ್ದೇವೆ.



ಸಾಹಿತ್ಯ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳು ಐವತ್ತು ವರ್ಷದ ಹಿಂದೆ ಕನ್ನಡವನ್ನು ಬೆಳೆಸಿದ ಮಟ್ಟಿಗೆ ಕೆಲದಶಕದಿಂದ ಕೆಲಸ ಮಾಡುತ್ತಿಲ್ಲ. ಅವು ಶಿಕ್ಷಣ ಕ್ಷೇತ್ರವನ್ನೂ ಬೆಳೆಸಿಲ್ಲ. ಅನೇಕ ಪೋಷಕರು ತಮ್ಮ ಮಕ್ಕಳ ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಷ್ ಆಯ್ಕೆ ಮಾಡಿಕೊಳ್ಳುತ್ತಾರೆ. ಅದಕ್ಕೆ ಕಾರಣವನ್ನು ಅರಿತು ಚಿಕಿತ್ಸಕ ಪರಿಹಾರ ಕಂಡುಕೊಳ್ಳುತ್ತಿಲ್ಲ. ಕನ್ನಡವನ್ನು ಅನ್ನದ ಭಾಷೆಯಾಗಿ ರೂಪಿಸುವಲ್ಲಿ ಯಶಸ್ಸನ್ನು ಸಾಧಿಸಿಲ್ಲ. ಕನ್ನಡ ಭಾಷೆಯ ಅಧ್ಯಯನ ಎಲ್ಲ ಪದವಿ, ವೃತ್ತಿ ಶಿಕ್ಷಣಗಳಲ್ಲಿ ಕಡ್ಡಾಯ. ರಾಜ್ಯಕ್ಕೆ ಬರುವ ದೇಶ–ವಿದೇಶದ ವಿದ್ಯಾರ್ಥಿಗಳು ಭಾಷಾ ಪಠ್ಯವಾಗಿ ವ್ಯಾವಹಾರಿಕ ಕನ್ನಡ ಓದಬೇಕು ಎನ್ನುವುದು ರಾಜ್ಯದ ಶಿಕ್ಷಣ ನೀತಿ. ಆದರೆ ಅದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಆಗಿದೆ.

ಅನ್ಯಭಾಷಿಗರಿಗೆ ಕನ್ನಡವನ್ನು ಕಲಿಸಿದರೆ ಸಂವಹನದ ಜೊತೆ ಕನ್ನಡಿಗರಿಗೆ ಉದ್ಯೋಗವನ್ನು ಸಾಧಿಸಲು ಸಾಧ್ಯವಾಗುತ್ತದೆ. ಗೋಕಾಕ್ ಚಳವಳಿಯ ನಂತರ ಕನ್ನಡ ಸಾಹಿತ್ಯ ಪರಿಷತ್ತು ಬೇರೆ ಚಳವಳಿಗೆ ಹೇಳುವಂತಹ ಸ್ಪಂದನೆಯನ್ನು ನೀಡಿಲ್ಲ. ಸಾಹಿತ್ಯ ಸಂಸ್ಥೆಗಳು ಮುಂದಿನ ತಲೆಮಾರಿಗೆ ಏನು ಬೇಕು ಎಂದು ಯೋಚಿಸುತ್ತಿಲ್ಲ. ಸರ್ಕಾರದ ರಾಜಕಾರಣಕ್ಕೆ ಪೂರಕವಾಗಿ ತನ್ನ ಕಾರ್ಯವನ್ನು ರೂಪಿಸುತ್ತಿರುವುದೂ ಒಂದು ಲೋಪ. ಒಟ್ಟಾರೆ ಅಭಿವ್ಯಕ್ತಿ ಸ್ವಾತಂತ್ರ್ಯ ತುಂಬ ಅಪಾಯದಲ್ಲಿ ಇದೆ. ಇಲ್ಲವೇ ಹಂಗಿನಲ್ಲಿ ಇದೆ ಎಂದು ನನಗೆ ಅನಿಸುತ್ತಿದೆ. ■





## ಚಿತ್ರಕಲೆಗೆ ಅವಕಾಶಗಳ ತೆರೆದ ಬಾಗಿಲು

**ಎಚ್.ಎ. ಅನಿಲ್ ಕುಮಾರ್**
ಚಿತ್ರಕಲಾವಿದರು ಮತ್ತು ಬೋಧಕರು

ಕಳೆದ ಐದು ದಶಕದಲ್ಲಿ ಕರ್ನಾಟಕದ ದೃಶ್ಯಕಲೆಯಲ್ಲಿ ಆಗಿರುವ ಮುಖ್ಯ ಪಲ್ಲಟವೆಂದರೆ ಆಗೆಲ್ಲ ಅನಾಮಿಕರಾಗಿದ್ದ ಈ ರಾಜ್ಯದ ಕಲಾವಿದರು ಮತ್ತು ಕಲಾಸಂಸ್ಥೆ, ಸಂಘಟನೆಗಳು ಮತ್ತು ಕಲಾಮೇಳಗಳು ಇಂದು ಇಡೀ ದೇಶದ ಗಮನವನ್ನು ತಮ್ಮ ಸಾಧನೆಗಳ ಕಡೆಗೆ ಸೆಳೆದಿಟ್ಟಿವೆ (ಕೆನ್ ಕಲಾಶಾಲೆ, ಚಿತ್ರಕಲಾ ಪರಿಷತ್ತು, ಚಿತ್ರಸಂತೆ ಇತ್ಯಾದಿ ಸಂಸ್ಥೆ, ಸಂದರ್ಭಗಳ ಮುಖಾಂತರ). ಹೀಗೆ ಗಮನ ಸೆಳೆದಿರುವುದು ಕೇವಲ ತಮ್ಮ ಸಂವಹನ ಸಾಮರ್ಥ್ಯದಿಂದಲ್ಲದೆ, ತಮ್ಮ ಕೃತಿ ಹಾಗೂ ದೃಶ್ಯ ಸಂಘಟನೆಯಲ್ಲಿ ಅಂತರ್ಭವಿಸಿಕೊಂಡಿರುವ ಗುಣಾತ್ಮಕ ವೈವಿಧ್ಯ ಹಾಗೂ ಅವುಗಳ ಸಮರ್ಪಕ ನಿರ್ವಹಣೆಯ ಮೂಲಕವೇ ಆಗಿರುವುದೊಂದು ವಿಶೇಷ.



1970ರ ದಶಕದಲ್ಲಿ ಕೆ. ವೆಂಕಟಪ್ಪ ಮತ್ತು ಮುಂಬಯಿಯಲ್ಲಿ ನೆಲೆಸಿದ್ದ ಕೆ.ಕೆ. ಹೆಬ್ಬಾರರು, ಈ ಇಬ್ಬರೇ ದೇಶದಾದ್ಯಂತ ಪರಿಚಿತರಿದ್ದ ಕರ್ನಾಟಕದ ಕಲಾವಿದರು. 80 ಹಾಗೂ 90ರ ದಶಕದಲ್ಲಿ ಇದೇ ಹೆಬ್ಬಾರರ ಪ್ರೋತ್ಸಾಹದಿಂದ ಶಾಂತಿನಿಕೇತನ ಮತ್ತು ಬರೋಡದ ಅಂತರರಾಷ್ಟ್ರೀಯ ಕಲಾಶಾಲೆಗಳಲ್ಲಿ ಕನ್ನಡದ ಕಲಾವಿದರು ಕಲಿತಿದ್ದರಿಂದ, ಅಲ್ಲಿಯವರೆಗಿನ ಕರ್ನಾಟಕದ ಕಲಾಚರಿತ್ರೆಯ ಪರಿಚಯವು ಆಯಿತು. ರಾಜ್ಯದಾದ್ಯಂತ ಕಲಾಶಾಲೆಗಳು ಎಲ್ಲೆಡೆ ಹಲವು ಕಾರಣಗಳಿಗೆ ಪ್ರಸಿದ್ಧವಾಗಿ, ಅವುಗಳ ನಡುವಣ ಕಲಾತ್ಮಕ ವಿನಿಮಯ ಹೆಚ್ಚಾಯಿತು. ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು, ಹೊರದೇಶಗಳ ಅಧ್ಯಯನದ ಅನುಭವಗಳನ್ನೂ ಹೊಂದುವ ಅವಕಾಶವನ್ನು ಇವರು ಪಡೆದುಕೊಂಡರು.

ರಾಜಧಾನಿ ಬೆಂಗಳೂರಿನಲ್ಲಿ ಹಲವು ರಾಷ್ಟ್ರೀಯ, ಅಂತರರಾಷ್ಟ್ರೀಯ ಸರ್ಕಾರಿ ಹಾಗೂ ವ್ಯಕ್ತಿಗತ ಸಂಸ್ಥೆಗಳು ಸ್ಥಾಪಿತವಾದದ್ದು (ಎನ್.ಜಿ.ಎಂ.ಎ, ಲಲಿತಕಲಾ ಅಕಾಡೆಮಿ, ಕೆ. ವೆಂಕಟಪ್ಪ ಸಂಗ್ರಹಾಲಯ, ಎಂ.ಎ.ಪಿ ಇತ್ಯಾದಿ) ಒಳ್ಳೆಯ ಬೆಳವಣಿಗೆ. ಈ ಸಂಸ್ಥೆಗಳು ಅಂತರರಾಷ್ಟ್ರೀಯ ಪ್ರದರ್ಶನಗಳನ್ನು ರಾಜ್ಯದಾದ್ಯಂತ ಪ್ರದರ್ಶಿಸುತ್ತಿದ್ದು, ಪ್ರಾದೇಶಿಕವಾಗಿದ್ದ ದೃಶ್ಯಕಲೆಯು ಜಾಗತಿಕ ಅಭಿರುಚಿ ಪಡೆದುಕೊಂಡದ್ದು ಒಂದು ಮುಖ್ಯ ಬದಲಾವಣೆ. ಇದರ ಪರಿಣಾಮವಾಗಿ, ಕೇವಲ ಚಿತ್ರ, ಶಿಲ್ಪ, ಮುದ್ರಣಕಲೆಗೆ ಮಾತ್ರ ಸೀಮಿತವಾಗಿದ್ದ ಕರ್ನಾಟಕದ ಕಲೆಯು ಇಂದು ಹತ್ತು ಹಲವು ಸಮಕಾಲೀನ ಜಾಗತಿಕ ಮಾಧ್ಯಮ–ಶೈಲಿಗಳನ್ನು (ಪರ್ಫಾರ್ಮೆನ್ಸ್, ಇನ್ಸ್ಟಾಲೇಷನ್, ವಿಡಿಯೊ ಕಲೆ) ಪ್ರಯೋಗಿಸಿ, ಅಳವಡಿಸಿಕೊಂಡಿದೆ.

ಕಳೆದ ಐದು ದಶಕದಲ್ಲಿ ಕರ್ನಾಟಕದ ಕಲೆಯಲ್ಲಿ ಆದ ಗುರುತರ ಬದಲಾವಣೆಗಳು ರೂಪ ನಿಷ್ಠ, ಸಾಂಸ್ಥಿಕ ಮತ್ತು ಅಭಿರುಚಿ ಮಾಧ್ಯಮಗಳದ್ದಾದರೂ ಇವುಗಳಿಗೆಲ್ಲ ಮೂಲದಲ್ಲಿ ಸ್ವತಃ ಗ್ಯಾಲರಿಯ ವ್ಯಾಪಾರಿ ಮನೋಭಾವವನ್ನು ತೆಗೆದುಹಾಕುವ ಸಲುವಾಗಿ ಕಲಾವಿದರೇ ಕಲಾ ರೆಸಿಡೆನ್ಸಿಗಳನ್ನು ಆರಂಭಿಸಿದ್ದೂ ಒಂದು ಕಾರಣ (ಬೆಂಗಳೂರು ಆರ್ಟ್ ರೆಸಿಡೆನ್ಸಿ, ನಂ 1 ಶಾಂತಿರಸ್ತೆ, ರಂಗೋಲಿ ಮೆಟ್ರೊ, ಪ್ರತಿ ಸ್ಟುಡಿಯೊ ಇತ್ಯಾದಿ) ದ್ವಿಭಾಷೀಯ ಕಲಾ ಇತಿಹಾಸ, ವಿಮರ್ಶೆ ಹಾಗೂ ರಸಗ್ರಹಣ ಕಲೆಯನ್ನು ಒಂದು ಶಿಸ್ತುಬದ್ಧ ವಿಭಾಗವಾಗಿ, ಶೈಕ್ಷಣಿಕವಾಗಿ ಮತ್ತು ಕಲಾ ಪತ್ರಿಕೋದ್ಯಮವಾಗಿ ಅಭಿವೃದ್ಧಿಗೊಳಿಸಿದ್ದೂ ಇದಕ್ಕೊಂದು ಕಾರಣ. ಒಟ್ಟಾರೆಯಾಗಿ ಕಳೆದ ಐದು ದಶಕದಲ್ಲಿ ವ್ಯಕ್ತಿಗತ ಆಸಕ್ತಿಯ, ಅರಮನೆ ಕೃಪಾಪೋಷಿತರಾಗಿದ್ದ, ಆದ್ದರಿಂದಲೇ ಕ್ಲಿಷ್ಟಾತ್ಮಕ ಕಲಾಕೃತಿಗಳನ್ನೇ ಹೆಚ್ಚಾಗಿ ಸೃಷ್ಟಿಸುತ್ತಿದ್ದ, ಕಲೆಗೆ ಒಂದು ಆರೋಗ್ಯಕರ ವಿಮರ್ಶೆ, ವ್ಯಾಖ್ಯಾನವನ್ನು ಬಲವಂತವಾಗಿ ತಡೆಯೊಡ್ಡುತ್ತಿದ್ದ ಕೆಲವೇ ಕಲಾವಿದರ ಹಿಡಿತದಿಂದ ಈಗ ಚಿತ್ರಕಲೆ ಮುಕ್ತವಾಗಿದೆ. ಸರ್ಕಾರಿ ಹಾಗೂ ವೈಯಕ್ತಿಕ ವ್ಯಕ್ತಿಗತ ಎಂಬೆರಡು ಸಾಮಾಜಿಕ ಸಂಸ್ಥೆಗಳ ನೆರವಿನಿಂದ ದೃಶ್ಯಾಕ್ಷರ ಜ್ಞಾನ, ಅಭ್ಯಾಸ ಮತ್ತು ಪ್ರಸರಣವು ಗಡಿದಾಟಿ ವಿಸ್ತಾರಗೊಂಡಿದೆ.

ಐದು ವರ್ಷದ ಹಿಂದೆ ಸರ್ಕಾರಿ ಸಂಸ್ಥೆಯಾದ ಕೆ. ವೆಂಕಟಪ್ಪ ಕಲಾಶಾಲೆಯನ್ನು ಖಾಸಗೀಕರಣದ ಕಾರ್ಪೊರೇಟ್ ಪರಿಧಿಗೆ ಹಸ್ತಾಂತರ ಮಾಡುವ ಹುನ್ನಾರವಿದ್ದಾಗ ರಾಜ್ಯದಾದ್ಯಂತ ದೃಶ್ಯ ಕಲಾವಿದರು ಇದನ್ನು ನಿರಂತರವಾಗಿ ಪ್ರತಿರೋಧಿಸಿ, ಈ ಕಲಾಶಾಲೆ, ಗ್ಯಾಲರಿಯನ್ನು ಬಡ ಕಲಾವಿದನ ಕೈಮೀರಿ ಹೋಗದಂತೆ ಉಳಿಸಿಕೊಂಡುಬಿಟ್ಟರು. ಹೀಗೆ ಶಕ್ತಿ ಕೇಂದ್ರಗಳ ಸ್ವಾರ್ಥವನ್ನು ಹಿಮ್ಮೆಟ್ಟಿಸುವ ಯುಕ್ತಿ–ಶಕ್ತಿಗಳನ್ನು ರೂಢಿಸಿಕೊಂಡಿರುವುದು, ಅದಕ್ಕೆ ಅವಶ್ಯಕವಿರುವ ಸಂಕೀರ್ಣ ಹಾಗೂ ಸಾಂದ್ರ ವ್ಯಕ್ತಿತ್ವವೊಂದನ್ನು ರೂಪಿಸಿಕೊಂಡಿರುವುದೇ ಕಳೆದ ಐದು ದಶಕದಲ್ಲಿ ಕರ್ನಾಟಕದ ದೃಶ್ಯಕಲೆಯ ಸಾಧನೆಯಾಗಿರುವುದಕ್ಕೆ ಒಂದು ಉದಾಹರಣೆ. ■